ಆಸ್ಪತ್ರೆಗಳಲ್ಲಿ ವೈದ್ಯರ & ಸಿಬ್ಬಂದಿಗಳ ಕೊರತೆ

**599 (684) ಶ್ರೀ ಸೋಮಲಿಂಗಪ್ಪ ಎಂ.ಎಸ್ (ಸಿರಗುಪ್ಪ)** : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಮತ್ತು ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು);

ಆ) ಖಾಲಿ ಹುದ್ದೆಗಳನ್ನು ಈವರೆಗೆ ತುಂಬದಿರಲು ಕಾರಣವೇನು?

ಇ) ಖಾಲಿ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

**ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)** :

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ವ್ಯಾಪ್ತಿಯಡಿಯಲ್ಲಿ ಬರುವ ವಿವಿಧ ಆಸ್ಪತ್ರೆ ಕೇಂದ್ರಗಳಲ್ಲಿ ಮಂಜೂರಾದ, ಕಾರ್ಯನಿರತ ಮತ್ತು ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳ ವಿವರ ಕೆಳಕಂಡಂತಿವೆ.

| ಹುದ್ದೆ | ಮಂಜೂರಾದ ಸಂಖ್ಯೆ | ಕಾರ್ಯನಿರತ ಸಂಖ್ಯೆ | ಖಾಲಿ |
|---|---|---|---|
| ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ | 2586 | 2297 | 289 |
| ಹಿರಿಯ ವೈದ್ಯಾಧಿಕಾರಿ | 383 | 285 | 98 |
| ಉಪ ಮುಖ್ಯ ವೈದ್ಯಾಧಿಕಾರಿ | 120 | 36 | 84 |
| ತಜ್ಞ ವೈದ್ಯರು | 1124 | 347 | 777 |
| ಹಿರಿಯ ತಜ್ಞರು | 1351 | 1229 | 122 |
| ದಂತ ಆರೋಗ್ಯ ಅಧಿಕಾರಿ | 260 | 198 | 62 |
| ಇತರೆ ವೃಂದದ ಗ್ರೂಪ್ ಸಿ ಸಿಬ್ಬಂದಿಗಳು | 43025 | 33046 | 9979 |
| ಗ್ರೂಪ್ ಡಿ | 13965 | 9924 | 4041 |

ಆ) ಮತ್ತು ಇ) ಕಾಲ-ಕಾಲಕ್ಕೆ ವಯೋ ನಿವೃತ್ತಿ/ಪದೋನ್ನತಿ ಹಾಗೂ ಗೈರು ಹಾಜರಿಯಿಂದ ಹುದ್ದೆಗಳು ಖಾಲಿ ಇರುತ್ತವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಆಸ್ಪತ್ರೆಗಳು/ ಕೇಂದ್ರಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡಿರುವ ಕ್ರಮದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

**ಪ್ರಶ್ನೆ ಸಂಖ್ಯೆ 684ಕ್ಕೆ ಅನುಬಂಧ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರ, ವೈದ್ಯರ ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು :**

1) ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್. ಹೆಚ್.ಎಂ) ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ-ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ.80,000 ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ.60,000 ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.
2) ಕೆ.ಹೆಚ್.ಎಸ್.ಡಿ. ಆರ್.ಪಿ ಯೋಜನೆಯಡಿಯಲ್ಲಿ ಇತರೆ ತಜ್ಞತೆ ಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ರೂ.65,000 ಹಾಗೂ ರೂ.50,000 ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್ ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ-ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ರೂ.5,000 ದಿಂದ ರೂ. 10,000 ಕ್ಕೆ ಹೆಚ್ಚಿಸಿ ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ರೂ.8,000 ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.